10. <u>ಖಾಸಗಿ ಕಾರ್ಯಕಲಾಪ</u>

ವಿಷಯ: '' ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರುವ ಬಗ್ಗೆ:''

★ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಮಾನ್ಯ ಉಪಾಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

''ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಈ ಸದನವು ನಿರ್ಣಯಿಸುತ್ತದೆ.''

ಉಪಾಧ್ಯಕ್ಷರು:- ಇದು 1995 ರಿಂದ ಇದೆ. ಇದನ್ನು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ :- ನಾನು ಪ್ರಾರಂಭ ಮಾಡಿದ್ದು ಇವತ್ತೇ. ನಾನು ಇದನ್ನು ಮುಂದಿನ ವಾರ ಪೂರ್ತಿಯಾಗಿ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು:- ಇದು ಮೂರು ವರ್ಷದಿಂದ ಆಗುತ್ತಿದೆ, ತಾವು ಮುಗಿಸಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ :- ಇದನ್ನು ಇವತ್ತು ಪ್ರಾರಂಭ ಮಾಡುತ್ತೇನೆ. ನಾನು ಇದರ ಬಗ್ಗೆ ಅನೇಕ ಸಾಕ್ಷಾಧಾರಗಳನ್ನು ಇಟ್ಟುಕೊಂಡು ಪ್ರಾರಂಭ ಮಾಡುತ್ತೇನೆ. ನನಗೆ ಮುಂದಿನ ವಾರ ಸ್ವಲ್ಪ ಸಮಯ ಕೊಡಬೇಕು. ಏಕೆಂದರೆ ಇಲ್ಲಿ ಕಸುಬುದಾರರು ಇಲ್ಲ. ಅವರೆಲ್ಲಾ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಸಿದ್ಧರಾಮಯ್ಯ :- ಕಸುಬುದಾರರಿಗೆ ಇನ್ನೂ ತೊಂದರೆ ಇಲ್ಲ, ಇದ್ದಾರೆ.

ಉಪಾಧ್ಯಕ್ಷರು:- ಇವತ್ತು ಮುಗಿಸುತ್ತೀರೋ?

ಶ್ರೀ ವಾಟಾಳ್ ನಾಗರಾಜ್ :- ಇವತ್ತು ಮುಗಿಸುವುದಕ್ಕೆ ಆಗುವುದಿಲ್ಲ. ಇವತ್ತು ಪ್ರಾರಂಭ ಮಾಡಿ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವೈಜನಾಥ್ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ನಾನು ಕಳುಹಿಸಿರುವ ನಿರ್ಣಯ ಈಗ ಪ್ರಾರಂಭ ಮಾಡದಿದ್ದರೆ ಅಥವಾ ಅದನ್ನು ಮುಂದಿನ ಸೆಷನ್‌ನಲ್ಲಿ ತೆಗೆದುಕೊಂಡರೆ ಅದು ಉಪಯೋಗ ಆಗುವುದಿಲ್ಲ.

ಉಪಾಧ್ಯಕ್ಷರು:- ದಯಮಾಡಿ ಕೇಳಿ, ಅದು ಡಿಸ್‌ಪೋಸ್ ಆಗುವ ತನಕ ತಮ್ಮದು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದುದರಿಂದ ಅವರಿಗೆ ಒತ್ತಾಯ ಮಾಡಿ ತಾವು ಮುಗಿಸಿ ಎಂದು ಹೇಳುತ್ತಿದ್ದೇನೆ. ಇನ್ನು ಬಹಳ ಖಾಸಗಿ ನಿರ್ಣಯಗಳು ಇವೆ.

ಶ್ರೀ ವೈಜನಾಥ್ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಮುಖ್ಯವಾಗಿದೆ. ಇದನ್ನು ನಾನು 10 ನಿಮಿಷದಲ್ಲೆ ಮುಗಿಸಿಬಿಡುತ್ತೇನೆ. ಅವರ ನಿರ್ಣಯ ಮುಂದಿನ ಬಾರಿ ತೆಗೆದುಕೊಳ್ಳಲಿ.

ಉಪಾಧ್ಯಕ್ಷರು:- ತಾವು ವಾಟಾಳ್ ತಮ್ಮದು ವಾಪಸ್ಸು ತೆಗೆದುಕೊಳ್ಳುತ್ತೀರಾ? ವಾಟಾಳ್ ರವರೇ ತಾವು ಪ್ರಾರಂಭ ಮಾಡಿ. ಪಾಟೀಲ್ ರವರೇ ತಮ್ಮ ರೆಸಲ್ಯೂಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ವೈಜನಾಥ ಪಾಟೀಲ :- ಮಾನ್ಯ ಉಪಾಧ್ಯಕ್ಷರೇ , ನಮ್ಮದು ಒಂದು ಕಾನ್ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಅಂಡರ್ 370 ಆರ್ಟಿಕಲ್‌ನಲ್ಲಿ ಮಾಡಬೇಕು. ನಾವು ರಾಜ್ಯದ ವಿಧಾನಸಭೆಯಿಂದ ಒಂದು ರೆಸಲ್ಯೂಷನ್ ಪಾಸ್ ಮಾಡಿ ಕಳುಹಿಸಬೇಕೆಂದು ಒಂದು ಬೇಡಿಕೆ ಇದೆ. ಏಕೆಂದರೆ ಆರ್ಟಿಕಲ್ 371 ರ ಅಮೆಂಡ್‌ಮೆಂಟ್ ಮಾಡಿದರೆ ಮಾತ್ರ ರಾಜ್ಯ ಸರ್ಕಾರಗಳಿಗೆ ಕೆಲವು ಹಿಂದುಳಿದ ಪ್ರದೇಶಗಳಿಗೆ ಈ ರಿಸರ್ವೇಷನ್ ಕೊಡುವುದಕ್ಕೆ ಅಧಿಕಾರ ಬರುತ್ತದೆ. ಇಲ್ಲದಿದ್ದರೆ ಈ ಕಡೆ ಮೆಡಿಕಲ್ ಎಜ್ಯುಕೇಷನ್ ಮತ್ತು ಎಂಪ್ಲಾಯ್‌ಮೆಂಟ್ ರಿಸರ್ವೇಷನ್ ಕೊಡುತ್ತೇವೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆದರೆ ಈ ಕಡೆ ರೂಲ್ಸ್ ಮಾಡುತ್ತಾರೆ. ಆರ್ಡರ್ ತೆಗೆಯುತ್ತಾರೆ, ಆಕಡೆ ಕೋರ್ಟಿಗೆ ಯಾರನ್ನಾದರೂ ಇವರೇ ಕಳುಹಿಸುತ್ತಾರೆ. ಅದರಿಂದ ತೆಗೆಯುತ್ತಾರೆ , ಆ ಕಡೆ ಕೋರ್ಟಿಗೆ ಯಾರನ್ನಾದರು ಇವರೇ ಕಳುಹಿಸುತ್ತಾರೆ. ಅದರಿಂದ ಉಪಯೋಗವಾಗುವುದಿಲ್ಲ. ರಾಜ್ಯಸರ್ಕಾರಕ್ಕೆ ಅಧಿಕಾರ ಬರಬೇಕಾದರೆ ಆರ್ಟಿಕಲ್ 371 ರಲ್ಲಿ ಸೇರಿಸಬೇಕಾಗುತ್ತದೆ. ಇದನ್ನು ಯಾವ ರೀತಿ ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ಸರ್ಕಾರದವರು ಮಾಡಿದ್ದಾರೆ, ಇದನ್ನು 30 ವರ್ಷದ ಮೊದಲೇ ಅಮೆಂಡ್‌ಮೆಂಟ್ ಮಾಡಬೇಕಾಗಿತ್ತು. ಅಂದಿನ ನಾಯಕರು ಹಿಂದುಳಿದ ಪ್ರದೇಶದವರು ಬಹುಶ: ಒಪ್ಪಿರಲಿಕ್ಕಿಲ್ಲ. ಈಗ ಒಪ್ಪಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಅಮೆಂಡ್‌ಮೆಂಟ್ ತರಬೇಕೆಂದರೆ ತಂದಿಲ್ಲ. ಒಂದು ಕಡೆ ತರುವ ಹಾಗೆ ಮಾಡುವುದು, ಇನ್ನೊಂದು ಕಡೆ ಕೋರ್ಟಿಗೆ ಕಳುಹಿಸುತ್ತಾರೆ. ಅಂತಹ ಕೆಟ್ಟ ಸರ್ಕಾರದ ಸಹವಾಸ ಮಾಡಬೇಡಿ . ಆ ಸಿಗ್ನೇಚರ್ ಕ್ಯಾಮಪೇನ್ ಮುಂದುವರಿಸಿ. ಕೆಡವಿ, ಈ ಕಡೆ ಬನ್ನಿ ನಾವು ಸ್ವಾಗತವನ್ನು ಕೋರುತ್ತೇವೆ.

ಶ್ರೀ ಸಿದ್ಧರಾಮಯ್ಯ :- ನಿಮಗೆ ಬಹಳ ಅನುಭವ ಇದೆ. ಯಾರ್ಯಾರ ನಿಲುವು ಏನು ಎಂಬ ಬಗ್ಗೆ. ನಿಮ್ಮ ಪಕ್ಷದ್ದು ಅವರಿಗೆ ಗೊತ್ತಿದೆ.

ಉಪಾಧ್ಯಕ್ಷರು:- ನೀವು, ಅವರು ಒಂದೇ ಜಿಲ್ಲೆಯವರು.

ಶ್ರೀ ವೈಜನಾಥ ಪಾಟೀಲ್ :- ಅದು ನಮ್ಮ ಸರ್ಕಾರ ಮಾಡುತ್ತಿಲ್ಲ. ಮೊದಲು ಯು.ಕೆ.ಪಿ. ಏರಿಯಾದವರಿಗೆ ನೌಕರಿನಲ್ಲೆ ಇಂಜಿನಿಯರ್ಸ್ ತೆಗೆದುಕೊಳ್ಳಬೇಕೆಂದು ಬಂಗಾರಪ್ಪ ಅವರ ಕಾಲದಲ್ಲಿ ಆರ್ಡರ್ ಹೊರಡಿಸಿದರು. ಮತ್ತೊಂದು ಕಡೆ ನೀರಾವರಿಗೆ...

ಉಪಾಧ್ಯಕ್ಷರು :- ದಯಮಾಡಿ ಕೇಳಿ, ತಮ್ಮ ನಿರ್ಣಯ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ವೈಜನಾಥ್ ಪಾಟೀಲ್ :- ಒಂದು ನಿಮಿಷ ನನ್ನ ಅಫೀಲ್ ಇದೆ. ಎಸ್. ಎಂ. ಕೃಷ್ಣ ರವರು ಇರಿಗೇಷನ್ ಮಂತ್ರಿಯವರು ಇದ್ದಾಗ, ಅಲ್ಲೆ ಎಲ್ಲಾ ಮದ್ದೂರು ತಾಲ್ಲೂಕಿನಿಂದ ರಿಟ್ ಕಳುಹಿಸಿ ತಡೆ ಒಡ್ಡಿದ್ದಾರೆ ನಮ್ಮ ಸರ್ಕಾರ ಎಂದಲ್ಲ. ತಮ್ಮ ಸರ್ಕಾರದಲ್ಲಿ ಕೂಡ ಅದೇ ಆಗಿದೆ. ಆ ದೃಷ್ಟಿಯಿಂದ ಆದ್ದರಿಂದ ಅದು ಅಮೆಂಡ್‌ಮೆಂಟ್ ಆಗಬೇಕೆಂದು ನನ್ನ ಬೇಡಿಕೆ ಇದೆ.

ಉಪಾಧ್ಯಕ್ಷರು :- ಮಾನ್ಯ ವಾಟಾಳ್‌ರವರೇ, 5 ನಿಮಿಷ ಮಾತ್ರ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ನಾನು ಮುಂದಿನ ವಾರ ಮುಗಿಸಬೇಕಾಗುತ್ತದೆ. ಈ ನಿರ್ಣಯ ಇವೊತ್ತು ಒಂದು ಚರ್ಚೆಗೆ ಬಂದಿದ್ದು ಸಂತೋಷ ಮತ್ತು ಸೌಭಾಗ್ಯ ಎಂದು ನಾನು ಅಂದು ಕೊಂಡಿದ್ದೇನೆ. ಏಕೆಂದರೆ ಇದು ಬರುತ್ತದೋ ಇಲ್ಲವೋ ಎಂದು ಇತ್ತು. ಇದು ದಿನಾಂಕ 31.3.95 ರಂದು ಮಂಡಿಸಿದಂತಹ ನಿರ್ಣಯ. ಈ ಸದನ ಯಾರೂ ಒಪ್ಪುವ

ಹಾಗೆ ಕಾಣುವುದಿಲ್ಲ. ಈ ಸದನದ ಬಹುತೇಕ ಇದರ ಗಾಂಭೀರ್ಯತೆ ಮತ್ತು ಇವರ ಮನಸ್ಸುಗಳನ್ನು ನೋಡಿದಾಗ ನನ್ನ ಪರವಾಗಿ ಯಾರು ಇರುತ್ತಾರೆ ನೋಡೋಣ. ಮತದಾನ ಹಾಕಿದರೆ ಎಷ್ಟು ಬರುತ್ತದೆಂದು ಗೊತ್ತಾಗುತ್ತದೆ.

ಉಪಾಧ್ಯಕ್ಷರು:- ಮಾನ್ಯ ನಾಗೇಗೌಡರು ಒಪ್ಪುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ನಾಗೇಗೌಡರು ಒಪ್ಪಲಾರರು. ಆ ರೀತಿ ನಾನು ಅಂದುಕೊಂಡಿಲ್ಲ. ಮತ್ತು ಇದಕ್ಕೆ ಪತ್ರಿಕಾ ಗ್ಯಾಲರಿಯವರದ್ದು ಬೆಂಬಲವಿಲ್ಲವೆಂದು ಕಾಣುತ್ತದೆ.

ಶ್ರೀ ಸಿದ್ಧ ರಾಮಯ್ಯ :- ಪಾನ ನಿರೋಧವನ್ನು ಆಂಧ್ರದವರು ಮಾಡಿದರು ಅದು ವಾಪಸ್ಸು ಹೋಗುತ್ತಿದೆ.

ಶ್ರೀ ಬಿ. ಎನ್. ಬಚ್ಚೇಗೌಡ:- ಸಿಕ್ರೇಟ್ ಓಟ್ ಹಾಕಬೇಕು.

1.40 ಪಿ.ಎಂ

ಶ್ರೀ ವಾಟಾಳ್ ನಾಗರಾಜ್:- ನನಗೆ ಅನ್ನಿಸುತ್ತದೆ. ನನಗೆ ರೈತ ಸಂಘ ಬೆಂಬಲ ಕೊಡುತ್ತದೆ. ಕಮ್ಯೂನಿಸ್ಟ್ ಬೆಂಬಲ ಕೊಡುತ್ತದೆ. ಕಮ್ಯೂನಿಸ್ಟ್ ಬೆಂಬಲ ಕೊಡಬಹುದು. ಬೆಂಬಲ ಕೊಡುವವರು ಇದ್ದಾರೆ. ಇಲ್ಲವೆಂದು ಅಲ್ಲ. ಆದರೆ ಅವತ್ತು ಮತದಾನಕ್ಕೆ ಬಂದಾಗ ನೀವು ಬೆಂಬಲ ಕೊಡಬೇಕು. ಈ ನಿರ್ಣಯದಿಂದ ನಿಮ್ಮ ಸರ್ಕಾರ ಬಿದ್ದು ಹೋಗುವುದಿಲ್ಲ. ಇದನ್ನು ನಾನು ಸ್ಪಷ್ಟಪಡಿಸುತ್ತೇನೆ. ಆದ್ದರಿಂದ ಅನಂತ್‌ನಾಗ್‌ರವರು ಇದಕ್ಕೆ ಬೆಂಬಲ ಕೊಡಲಾರರು, ಅವರು ಸಂಪೂರ್ಣ ಇದರ ವಿರುದ್ಧ. ಈ ಕಸುಬುದಾರರು ಯಾರಿದ್ದಾರೆ ಅವರು ಇವ್ಹೊತ್ತು ಈ ಸದನದಲ್ಲಿ ಇಲ್ಲ. ನಂಜೇಗೌಡರು ಇಲ್ಲ. ಮುಖ್ಯ ಮಂತ್ರಿಗಳು ಇಲ್ಲ. ಏಕೆಂದರೆ ಈ ಬಗ್ಗೆ ಸ್ವಾರಸ್ಯವಾಗಿ, ಹೆಚ್ಚು ಶಕ್ತಿಯುತವಾಗಿ ಚರ್ಚೆ ಆಗಬೇಕಾದರೆ ಎಲ್ಲರೂ ಇರಬೇಕು.

ಶ್ರೀ ಸಿದ್ಧರಾಮಯ್ಯ:- ನೀವು ಸರಿಯಾಗಿ ತಯಾರಾಗಿ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಇದಕ್ಕೆ ಏನು ತಯಾರಾಗಬೇಕಾಗಿದೆ? ದೇಶಾದ್ಯಂತ ನಡೆದಿರತಕ್ಕಂಥ ವಿಚಾರದ ಬಗ್ಗೆ ತಯಾರಾಗಬೇಕಾಗಿಲ್ಲ. ಈ ಪಾನನಿರೋಧದ ಬಗ್ಗೆ ಚರ್ಚೆ ಮಾಡುವಾಗ ಇದರ ಬಗ್ಗೆ ಅಳವಾದ ಸಾಮರಸ್ಯ ಇರಬೇಕು. ನಿಮ್ಮಲ್ಲಿ ಅನೇಕ ಜನ ಕಸುಬುದಾರರಿದ್ದಾರೆ. ಇದರಲ್ಲಿ ಎರಡು ರೀತಿಯ ಪದ ಇದೆ. ಒಂದು ಅಡ್ಡಕಸುಬಿ ಇನ್ನೊಂದು ಕಸುಬುದಾರ. ನಾನು ಅಡ್ಡಕಸುಬಿ ಕೆಟಗರಿಗೆ ಸೇರಿರತಕ್ಕವನು ಅದರ ಬಗ್ಗೆ ತಕರಾರೇನು ಇಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ, ಈ ಪದ ಕೆಟ್ಟ ಪದವೇನಲ್ಲ. ಒಳ್ಳೆಯ ಪದವೇ, ಗ್ರಾಮ್ಯ. ನಾನು ಅಶಕ್ತ ಶಕ್ತನಲ್ಲ ಎನ್ನತಕ್ಕಂಥದ್ದು.

ಶ್ರೀ ಸಿದ್ಧರಾಮಯ್ಯ:- ಯಾರಿಗೆ ಕಸುಬು ಮಾಡುವುದಕ್ಕೆ ಬರುವುದಿಲ್ಲವೇ ಅವರು ಅಡ್ಡಕಸುಬಿಗಳು.

ಶ್ರೀ ವಾಟಾಳ್ ನಾಗರಾಜ್ :- ನಿಜ. ನನಗೆ ಕಸುಬು ಮಾಡುವ ಅಭ್ಯಾಸ ಇಲ್ಲ. ಅನೇಕ ಸಾರಿ ನಾವೆಲ್ಲ ಒಟ್ಟಿಗೆ ಸೇರಿದ್ದೇವೆ. ನಾನು ಕಸುಬುದಾರ ಅಲ್ಲ ಎಂಬುದು ನಿಮಗೆ ಗೊತ್ತಿದೆ; ನಾನು ಅಂತಹ ಮನುಷ್ಯ ಕೂಡ ಅಲ್ಲ. ನಾಗೇಗೌಡರು ಕಸುಬುದಾರರು ನಂ. 1 ಇತ್ತೀಚೆಗೆ ಏನಾಗಿದೆ ಗೊತ್ತಿಲ್ಲ.

ಉಪಾಧ್ಯಕ್ಷರು:- ಅನಂತ್‌ನಾಗ್‌ರವರು ನಂ. 1 ಎಂದು ಹೇಳಿದಿರೆ?

ಶ್ರೀ ವಾಟಾಳ್ ನಾಗರಾಜ್ :- ಅನಂತ್‌ನಾಗ್‌ರವರದ್ದು ರ್‍ಯಾಂಕ್‌ಗಳಲ್ಲಿ ಪ್ರಥಮ ರ್‍ಯಾಂಕ್. ವಿರೋಧಪಕ್ಷದಲ್ಲಿ ಅಂತಹ ಕಸುಬುದಾರರು ಯಾರೂ ಇಲ್ಲ. ಇದ್ದರೂ ಕೂಡ ಕಡಿಮೆಯೇ. ಯಾರು ಕಸುಬುದಾರರು ಎಂಬ ಪಟ್ಟಿ ನಿಮಗೂ ಗೊತ್ತು, ನನಗೂ ಗೊತ್ತು.

ಶ್ರೀ ಕೆ. ಎನ್. ನಾಗೇಗೌಡ:- ಜಾತ್ಯಾತೀಯ ಸಮಾಜವನ್ನು ನಾವು ಇದರಲ್ಲೇ ಕಾಣುವುದು.

ಶ್ರೀ ಜೆ.ವಿ. ಶ್ರೀ ರಾಮರೆಡ್ಡಿ :- ಐಕ್ಯತೆಯನ್ನು ಕಾಣುವುದು ಇದರಲ್ಲೇ. ನಿಜ ಅದನ್ನು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಸಮಾಜವಾದ ಇದರಲ್ಲೇ ಇರತಕ್ಕಂಥದ್ದು, ಜಾತ್ಯಾತೀತತೆ ಇದರಲ್ಲೇ ಇರತಕ್ಕಂಥದ್ದು, ಪಕ್ಷರಹಿತ ಇಲ್ಲೇ ಇರತಕ್ಕಂಥದ್ದು. ಇಂತಹ ಒಂದು ಪ್ರಾವಿತ್ರ್ಯತೆ ಬಹುಶ: ಯಾವುದರಲ್ಲೂ ಇಲ್ಲವೇನೊ? ಆದರೆ ಇಷ್ಟಾದರೂ ಸಹ ನಾನು ತಮಗೆ ಏನು ಹೇಳುತ್ತಿದ್ದೇನೆ ಎಂದರೆ;

ಶ್ರೀಮತಿ ಬಿ.ಟಿ. ಲಲಿತಾನಾಯಕ್ :- ನೀವೆಲ್ಲಾ ಸಮಾಜವಾದವನ್ನು ಹೇಳುತ್ತಿದ್ದಿರಿ; ಆದರೆ ಮಹಿಳೆಯರ ವಿಷಯದಲ್ಲಿ ಲಿಂಗಭೇದವಂತೂ ಇದೆ. ಇದರಲ್ಲಿ ಲಿಂಗಭೇದ ಇಲ್ಲ. ಮಹಿಳೆಯರು ಪುರುಷರು ಸಮಾನವಾಗಿ ಕುಡಿಯುತ್ತಾರೆ ಎಂಬುದು ಇಲ್ಲ ಅಲ್ಲವೇ? ಅದನ್ನು ತಾವು ಒಪ್ಪಿಕೊಳ್ಳಬೇಕು. ಆದ್ದರಿಂದಲೇ ನಾನು ಹೇಳುವುದು ಬಹಳಷ್ಟು ವಿಚಾರಗಳಲ್ಲಿ ಮಹಿಳೆಯರಿಗೆ ತಾವು ಪ್ರಾತಿನಿಧ್ಯ ಕೊಡಬೇಕು ಎಂದು ಕೇಳುತ್ತಿರುವ ಉದ್ದೇಶವೇ ಇಷ್ಟು. ಮಹಿಳೆಯರಿಗೆ ತಾವು ಪ್ರಾತಿನಿಧ್ಯ ಕೊಡಬೇಕು ಎಂದು ಕೇಳುತ್ತಿರುವ ಉದ್ದೇಶವೇ ಇಷ್ಟು ಮಹಿಳೆಯರಾದರು ಕುಡಿಯದೆ ಆ ಮುಬ್ಬಿನಿಂದ ಹೊರಗಿದ್ದು ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :- ಇಲ್ಲ ಮಹಿಳೆಯರೆಲ್ಲರೂ ಹಾಗೆ ಕುಡಿಯುವುದಿಲ್ಲ, ಎಲ್ಲಾ ಪಕ್ಷದವರು ಕುಡುಯುವುದಿಲ್ಲ. ಶ್ರೀರಾಂ ರೆಡ್ಡಿಯವರು ಮಹಿಳೆಯರ ಬಗ್ಗೆ ಮಾತನಾಡುತ್ತಾರೆ, ಅವರ ಬಗ್ಗೆ ಅವರಿಗೆ ಏನು ಗೊತ್ತಿದೆ?

ಶ್ರೀ ವಾಟಾಳ್ ನಾಗರಾಜ್ :- ಇತ್ತೀಚೆಗೆ ಇವರನ್ನು ನಾವು ತಯಾರು ಮಾಡುತ್ತಿದ್ದೇವೆ. ಮೊನ್ನೆ ಅವರಿಗೂ ನಮಗೂ ಗೌಪ್ಯ ಒಪ್ಪಂದವಾಗಿದೆ. ನಾನು ತಾಳಿ ತಂದುಕೊಡಬೇಕು ಎಂದು. ತಂದುಕೊಡುತ್ತೇನೆ ಅದರಲ್ಲಿ ಅಭ್ಯಂತರವೇನಿಲ್ಲ. ನಿಮ್ಮ ಮಾಂಗಲ್ಯ ಭಾಗ್ಯ ಯೋಜನೆಯಲ್ಲಿ ಐದು ಸಾವಿರ ರೂಪಾಯಿಗಳನ್ನು ಕೊಡಬೇಕಾದುದು ಇಲ್ಲ. ನಾನೇ ಸುಂದರವಾದಂಥ ತಾಳಿ ಮಾಡಿಸಿ ಕೈಮುಗಿದು ಒಪ್ಪಬೇಕೆಂದು ಮಾಡಿದೇ. ನಾನು ಶತಾಯ ಗತಾಯ ಮದುವೆ ಮಾಡಿಸಲೆ ಬೇಕು ಎಂದು ತೀರ್ಮಾನ ಮಾಡಿದ್ದೇನೆ. ಮಾಡಿಸದಿದ್ದರೆ ನಾವು ಅವರ ಪಕ್ಕದಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಬಹಳ ಕಷ್ಟ. ಕೆಲವು ವಿಚಾರಗಳನ್ನು ಈ ಸದನದಲ್ಲಿ ಚರ್ಚೆ ಮಾಡುವಂತಹದ್ದಲ್ಲ. ಅವರು ಏನುಹೇಳುತ್ತಾರೆ ಎಂದರೆ ಮಹಿಳೆಯರಿಗೆ 30 ಪರ್ಸೆಂಟ್ ಅಲ್ಲ, 50 ಪರ್ಸೆಂಟ್ ಮೀಸಲಾತಿಯನ್ನು ಕೊಡಬೇಕು ಎಂದು ಹೇಳಿದರು ಅಂದರೆ 224 ಜನರಲ್ಲಿ 50 ಪರ್ಸೆಂಟ್ ಅಂದರೆ 112 ಜನ ಅಂದರೆ ಪಕ್ಕದಲ್ಲ ಒಬ್ಬರು. ಇವರ ಗತಿ ಏನು? ಅದಕ್ಕೆ ನಾನು ಅವರಿಗೆ ಹೇಳಿದೆ 30 ಪರ್ಸೆಂಟೇ ಇರಲಿ, 50 ಪರ್ಸೆಂಟ್ ಆದರೆ ಅಪಾಯಕ್ಕೆ ಸಿಕ್ಕಿಕೊಳ್ಳುತ್ತೀರಿ ಎಂದೆ. ಆದ್ದರಿಂದ ಅವರು ಮದುವೆ ಆಗುವುದಕ್ಕೆ ತಯಾರಾಗಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ:- ಅದಕ್ಕೂ ಇದಕ್ಕೂ ಸಂಬಂದ ಇಲ್ಲ. ಆ ರೀತಿಯ ಅಪಾಯ ಬಂದರೆ ನನಗೆ ರಕ್ಷಣೆ ಕೊಡುವುದಕ್ಕೆ ನೀವು ನನ್ನ ಪಕ್ಕದಲ್ಲಿಯೇ ಇರುತ್ತೀರಲ್ಲಾ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಚರ್ಚೆ ಬೇರೆ ಕಡೆ ಹೋಗುತ್ತದೆ. ದಯಮಾಡಿ ವಿಷಯಕ್ಕೆ ಸಂಬಂಧಪಟ್ಟಂತೆ ಸದನದ ಸಮಯವನ್ನು ಹಾಳು ಮಾಡುವುದು ಬೇಡ. ಸದನದ ಗಂಭೀರತೆ ಹಾಳಾಗುತ್ತದೆ.

ಉಪಾಧ್ಯಕ್ಷರು:- ಸದನದ ಗಂಭೀರತೆ ಏನೂ ಆಗಿಲ್ಲ. ಸದನದಲ್ಲಿ ಸ್ವಲ್ಪ ಸ್ವಾರಸ್ಯಕರ ಇರಬೇಕಾಗುತ್ತದೆ.

ಶ್ರೀ ಕೆ. ಎನ್ . ನಾಗೇಗೌಡ :- ಮಾನ್ಯ ಸದಸ್ಯರು ಬೇಸರ ಮಾಡಿಕೊಳ್ಳಬಾರದು. ಈ ಸದನ ಯಾವಾಗಲೂ ಬೇರೆಯವರ ಬಗ್ಗೆ, ಸಾರ್ವಜನಿಕರ ಬಗ್ಗೆ ಚಿಂತನೆ ಮಾಡುತ್ತಿರುತ್ತದೆ. ಸದನದ ಸದಸ್ಯರ ಬಗ್ಗೆ ಸ್ವಲ್ಪ ಸ್ವಾರಸ್ಯ ಇರಬೇಕು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಇರಲಿ. ಆದರೆ ಇದಕ್ಕಾಗಿ ಹೆಚ್ಚು ಸಮಯವನ್ನು ತೆಗೆದು ಕೊಂಡರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಈ ಮದ್ಯಪಾನವೆಂಬುದು ಒಂದು ಪಿಡುಗಾಗಿದೆ. ಈ ಪಿಡುಗಿನ ಬಗ್ಗೆ ನಾವು ಪ್ರಾಮಾಣಿಕವಾದಂತಹ ಚಿಂತನೆಯನ್ನು ಮಾಡಬೇಕು. ಈ ಪ್ರಾಮಾಣಿಕವಾದಂತಹ ಚಿಂತನೆ ಎಂದರೆ ಏನು? ಈ ಸಮಾಜದಲ್ಲಿ ಈ ಮದ್ಯಪಾನದಿಂದ ಆಗುವಂತಹ ಅನಾಹುತಗಳು ಏನು? ಅಂದರೆ ಯಾವ ಯಾವ ಹಂತದಲ್ಲಿ ಈ ಅನಾಹುತಗಳು ಆಗುತ್ತವೆ, ಯಾವ್ಯಾವ ರೀತಿಯಲ್ಲಿ ಆಗುತ್ತವೆ, ಇದನ್ನು ನಾವು ಪ್ರಾಮಾಣಿಕವಾಗಿ ತಪ್ಪಿಸುವುದಕ್ಕೆ ಯಾವ್ಯಾವ ಮಾರ್ಗಗಳನ್ನು ಹುಡುಕಬೇಕು. ಇದರ ಬಗ್ಗೆ ನಮ್ಮ ಮಾನ್ಯ ಉಪ ಮುಖ್ಯ ಮಂತ್ರಿಯವರು ಹೇಳುವುದೇನೆಂದರೆ ಯಾವ ರಾಜ್ಯದಲ್ಲೂ ಇದನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಇದರಲ್ಲಿ ಎಲ್ಲರೂ ವಿಫಲರಾಗಿದ್ದಾರೆ ಎಂದು ಹೇಳಿ ಇವರು ಈ ವಿಚಾರದಲ್ಲಿ ನಿರುತ್ಸಾಹಿಗಳಾಗಿದ್ದಾರೆ. ಪೂಜ್ಯ ಮಹಾತ್ಮಗಾಂಧಿಯವರು ಒಮ್ಮೆ ಮಾತನಾಡುವಂತಹ ಸಂದರ್ಭದಲ್ಲಿ ತಾವೇ ಅಧಿಕಾರಕ್ಕೆ ಬಂದರೆ ಮೊದಲ ಕೆಲಸ ಪಾನ ನಿರೋಧವನ್ನು ಜಾರಿಗೆ ತರುವಂಥಾದ್ದು ಎಂದು ಹೇಳಿದ್ದರು. ಅವರು ಈ ದೇಶದ ಮಹಾತ್ಮರು. ಅವರ ದಾರಿಯನ್ನು ಅನುಸರಿಸುವುದಾದರೆ ಅವರ ಬಗ್ಗೆ ಪ್ರೀತಿ, ವಿಶ್ವಾಸವಿರುವುದಾದರೆ ಗೌರವ ಕೊಡುವುದಾದರೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿವೆ. ಈ ಐವತ್ತು ವರ್ಷಗಳಿಂದ ಪಾನ ನಿರೋಧದ ಬಗ್ಗೆ ಪ್ರಾಮಾಣಿಕವಾದಂತಹ ಚಿಂತನೆಯಾಗಿಲ್ಲ. ಅದು ರಾಜಕಾರಣಿಗಳ ಮಟ್ಟದಲ್ಲೂ ಆಗಿಲ್ಲ. ಅಧಿಕಾರಿಗಳ ಮಟ್ಟದಲ್ಲೂ ಆಗಲಿಲ್ಲ, ಚಿಂತನೆ ಮಾಡುವಂತಹ ಚಿಂತನಕಾರರ ಮಟ್ಟದಲ್ಲಿಯೂ ಆಗಲಿಲ್ಲ. ಈ ವಿಷಯವಾಗಿ ರಾಷ್ಟ್ರೀಯ ಮಟ್ಟದಲ್ಲಿ ಚಿಂತನೆಯಾಗಬೇಕು, ಹೀಗೆ ಆದಾಗ ಮಾತ್ರ ಇದಕ್ಕೆ ಒಂದುಹೊಸ ಆಯಾಮ ದೊರೆಯುತ್ತದೆ. ಸರ್ಕಾರ ಆಯವ್ಯದಲ್ಲಿ ಮದ್ಯಪಾನ ಮಾರುವುದರಿಂದ ಕೋಟ್ಯಾಂತರ ರೂಪಾಯಿ ಹಣ ಸಿಗುತ್ತದೆಂದು ಹೆಚ್ಚಿನ ಬೆಂಬಲ ಸಿಗುತ್ತದೆಂದು ನಾವು ಇದಕ್ಕೆ ಬೆಂಬಲವನ್ನು ಕೊಡುವಂಥಾದ್ದು ಅಲ್ಲ. ಇದರ ಹಿಂದೆ ಇರುವಂತಹ ಪಿಡುಗು ಏನು ಎಂಬುದನ್ನು ನಾವು ಅತ್ಯಂತ ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಈ ದೃಷ್ಟಿಯಲ್ಲಿ ಶ್ರೀಮತಿ ಲಲಿತಾ ನಾಯಕ್‌ರವರೇ, ತಮ್ಮ ಗಮನಕ್ಕೆ ತರುವುದೇನೆಂದರೆ ಈ ಪಾನ ನಿರೋಧವನ್ನು ಸಮಗ್ರವಾಗಿ ಜಾರಿ ಮಾಡಬೇಕಾದರೆ ಮಹಿಳೆಯವರು ಪ್ರಾಮಾಣಿಕವಾಗಿ ನಿಲ್ಲಬೇಕು. ಈ ಚಳುವಳಿಯನ್ನು ಹಂತ ಹಂತವಾಗಿ ಅಂದರೆ ಮೊದಲನೆಯದಾಗಿ ಮನೆಯಲ್ಲಿ ಶುರುವಾಗಬೇಕು, ಮನೆಗಳಲ್ಲಿ ಗಂಡಂದಿರು ಕುಡಿದು ಬಂದರೆ ನೀವು ಮಾಡಬೇಕಾದಂತಹ ಮೊದಲ ಕರ್ತವ್ಯವೆಂದರೆ ಅವರನ್ನು ಮನೆಯಿಂದ ಹೊರಗಡೆ ನಿಲ್ಲಿಸಬೇಕು. ಅವರು ಮನೆಯ ಒಳಗಡೆ ಬರಬಾರದು. ಅವರು ಹತ್ತಿರ ಬರಬಾರದು. ಎಲ್ಲಾ ದೃಷ್ಟಿಯಿಂದಲೂ

ಅವರನ್ನು ಮೈಲಿಗೆ ಜನರ ರೀತಿಯಲ್ಲಿ ಹೊರಗಡೆ ಹಾಕಬೇಕು. ಮೊದಲನೆಯದಾಗಿ ಮದ್ಯ ಸೇವನೆ ಮಾಡುವಂತಹ ತನ್ನ ಗಂಡನ ವಿರುದ್ಧ ಸೆಟೆದು ನಿಲ್ಲುವಂತಹ ಶಕ್ತಿ ಮಹಿಳೆಯರಲ್ಲಿ ಬರಬೇಕು. ಈ ಕಾರ್ಯ ಇಡೀ ರಾಜ್ಯದ, ದೇಶದ ಮಹಿಳೆಯರು ಮಾಡಬೇಕಾದಂತಹ ಮೊದಲ ಕರ್ತವ್ಯವಾಗಿದೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನಲ್ಲಿ ಇರುವಂತಹ ಸ್ಲಮ್ ಗಳಲ್ಲಿ ಸಾಯಂಕಾಲ ಐದು ಗಂಟೆಗೆ ಹೋಗಿ ಅಲ್ಲಿ ಅವರು ತಮ್ಮ ಗಂಡಂದಿರನ್ನು ಹೊರಗಡೆ ಇಡುವುದಕ್ಕೆ ಆಗುತ್ತದಾ ಎಂಬುದನ್ನು ನೋಡಿ.

ಶ್ರೀ ವಾಟಾಳ್ ನಾಗರಾಜ್ :- ಅವರು ಏನು ಹೇಳಿದರು, ಎಂಬುದು ಅರ್ಥವಾಗಲಿಲ್ಲ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :- ಅವರು ಏನು ಹೇಳಿದರೆಂದರೆ ನೀವು ಸಂಜೆ ವೇಳೆಯಲ್ಲಿ ಬೆಂಗಳೂರಿನಲ್ಲಿರುವಂತಹ ಸ್ಲಮ್ ಗಳಲ್ಲಿ ನೋಡಿ ನೀವು ಹೇಳಿದಂತೆ ಮಹಿಳೆಯರು ಮಾಡುವುದಕ್ಕೆ ಸಾಧ್ಯವಾಗುತ್ತದಾ, ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ನಿಜ, ಇತ್ತೀಚಿನ ದಿವಸಗಳಲ್ಲಿ ಮದ್ಯಪಾನ ಮಾಡುವುದೇ ಒಂದು ರೀತಿಯ ಗೌರವ, ಪ್ರತಿಷ್ಠೆ, ಸ್ಟೈಲ್ ಆಗಿದೆ. ಯಾರು ಕುಡಿಯುವುದಿಲ್ಲವೆಂದರೆ ಅವರನ್ನು ಅನಾಗರಿಕ, ಗಾಂಧಿವಾದಿ, ಎಂದು ಹೇಳುತ್ತಾರೆ, ಮತ್ತೆ ತಪ್ಪು ಎನ್ನುತ್ತಾರೆ, ಅಂದರೆ ಇವನಿಗೆ ಏನು ಗೊತ್ತಿಲ್ಲವೆಂದು ಹೇಳುತ್ತಾರೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ :- ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಗೌರವವೆನ್ನುವಂಥಾದ್ದು ಅಲ್ಲ, ಅದೆಲ್ಲಾ ಮೇಲ್ವರ್ಗದವರಿಗೆ, ಕೆಳವರ್ಗದವರಲ್ಲಿ ಮಹಿಳೆಯರು ಶೋಷನೆಗೆ ಒಳಗಾಗಿದ್ದಾರೆ. ತಾವು ಹೇಳಿದ ಹಾಗೆ ಮಹಿಳೆಯರಿಂದ ಪ್ರತಿಭಟನೆಯಾಗಬೇಕು. ಆದರೆ ಆ ರೀತಿ ಮಾಡಿದಾಗ ಅವರನ್ನೇ ಕೊಂದು ಹಾಕುತ್ತಾರೆ, ಇಲ್ಲದಿದ್ದರೆ ತಾವೇ ಸಾಯುತ್ತಾರೆ. ಇದು ನನ್ನ ಅನುಭವಕ್ಕೂ ಬಂದಿದೆ, ಬಹಳಷ್ಟು ಕಡೆ ನಡೆಯುತ್ತಿರುವಂಥಾದ್ದನ್ನು ನೋಡುತ್ತಿದ್ದೇವೆ. ಈ ರೀತಿ ಹೆಂಡತಿ ಹೇಳಿದರೆ ದೊಡ್ಡ ಯುದ್ಧವಾಗುತ್ತದೆ. ಇದು ಏಕೆ ಬೇಕೆಂದು ಸುಮ್ಮನೆ ಇದ್ದರೆ ಅವನು ಹೆಚ್ಚು ಹೆಚ್ಚು ಕುಡುಕನಾಗುತ್ತಾನೆ. ಈ ರೀತಿ ಮಾಡುತ್ತಾರಲ್ಲಾ ಎಂದು ಎರಡು ಹೊತ್ತು ಕಿರಿಕಿರಿ ಮಾಡುವುದಕ್ಕೆ ಶುರು ಮಾಡಿದರೆ ಏನಾದರೂ ಒಂದು ಅನಾಹುತವಾಗುತ್ತದೆ. ಆದುದರಿಂದ ಇದು ಕಷ್ಟವಾಗುತ್ತದೆ. ಆದರೆ ನೀವು ಹೇಳುವಂಥಾದ್ದು ನಿಜ, ಮಹಿಳೆಯರು ಇದಕ್ಕಾಗಿ ಹೋರಾಟವನ್ನು ಮಾಡಬೇಕು. ಆದರೆ ಇದು ಎಲ್ಲಾ ವರ್ಗದವರಿಗೂ ಷೋಕಿ ಎಂದು ಒಪ್ಪುವುದಿಲ್ಲ. ಇವತ್ತು ಕೊಲೆ, ಅತ್ಯಾಚಾರ, ಮಾಡಿದ್ದಾನೆಂದರೆ ಅವನು ಕುಡುಕ ಕುಡಿದು ಮಾಡಿದ್ದಾನೆ ಎಂದು ಹೇಳುತ್ತಾರೆ. ಅಂದರೆ ಕುಡುಕನೆಂದರೆ ಹೇಗೆ ದುಷ್ಪ ಕೆಲಸಗಳಿಗೆ ಪ್ರೇರಣೆ ಕೊಡುತ್ತಾನೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಉಪಾಧ್ಯಕ್ಷರು :- ಮಾನ್ಯ ವಾಟಾಳ್ ನಾಗರಾಜ್ ರವರೇ ತಮ್ಮ ಚರ್ಚೆಯನ್ನು ಮುಂದಿನ ವಾರ ಮುಂದುವರಿಸಿ, ಈಗ ಸದಸ್ಯರುಗಳು ಊರಿಗೆ ಹೋಗಬೇಕೆಂದಿದ್ದಾರೆ. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದವು 1 ಗಂಟೆ 55 ನಿಮಿಷಕ್ಕೆ ಮುಂದುಡಲ್ಪಟ್ಟು ಪುನ: ದಿನಾಂಕ 23 ನೇ ಮಾರ್ಚ್ ಮಾಹೆ 1998ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

★ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ